356 ಶ್ರೀ ಮಲ್ಲಿಕಾ ಪ್ರಸಾದ್ : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ಶಾಸನರಚನೆ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ವ್ಯಾಪ್ತಿಯಲ್ಲಿ ಎ.ಡಿ.ಬಿ. ಯೋಜನೆಯಡಿ 2ನೇ ಹಂತದ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗಲು ಕಾರಣವೇನು?

ಆ) 2ನೇ ಹಂತದ ಟೆಂಡರ್ ರದ್ದುಪಡಿಸಲು ಕಾರಣವೇನು? ಯಾವಾಗ ರದ್ದುಪಡಿಸಲಾಗಿದೆ?

ಇ) ಎ.ಡಿ.ಬಿ. ಯೋಜನೆಯಡಿ ಪುತ್ತೂರಿನ ಉಳಿಕೆ ರಸ್ತೆ ಕಾಮಗಾರಿಯ ಅನುಷ್ಠಾನ ಯಾವ ಹಂತದಲ್ಲಿದೆ?

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸ ಲಾಗುವುದು?

ಉ) ಎಷ್ಟು ಕಿ.ಮೀ. ರಸ್ತೆ ಕಾಮಗಾರಿ ಅನುಷ್ಠಾನಕ್ಕೆ ಬಾಕಿ ಇದೆ?

(ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ ಟಿ.ಕೆ.ರಾಜನ್ ಅವರಿಗೆ, ರೂ. 10.88 ಕೋಟಿ ಮೊತ್ತದ ಗುತ್ತಿಗೆಯನ್ನು 28.11.2006 ರಲ್ಲಿ ವಹಿಸಲಾಗಿತ್ತು. ಗುತ್ತಿಗೆ ಕರಾರಿನಂತೆ ಅವರು ಕಾಮಗಾರಿಯನ್ನು 27.11.2007ಗೆ ಪೂರ್ಣಗೊಳಿಸಬೇಕಾಗಿತ್ತು. ಸಾಕಷ್ಟು ನೋಟೀಸುಗಳನ್ನು ನೀಡಿದ್ದರೂ ಸಹ, ಅವರು ಕೆಲಸವನ್ನು ಮಂದಗತಿಯಲ್ಲಿ ಮಾಡುತ್ತಿದ್ದರು, ಹಾಗೂ ಹೆಚ್ಚಿನ ಕಾಲಾವಕಾಶ ನೀಡಿದ್ದರೂ ಸಹ, ಕೆಲಸದಲ್ಲಿ ಸಾಕಷ್ಟು ಪ್ರಗತಿಯಿಲ್ಲವಾದ್ದರಿಂದ, ದಿ: 27.08.2008ರ ವರೆಗೆ ಕೇವಲ ರೂ. 4.94 ಕೋಟಿ ಪ್ರಗತಿಯಾಗಿದ್ದರಿಂದ ಅವರ ಗುತ್ತಿಗೆಯನ್ನು 18.11.2008 ರಂದು ರದ್ದುಪಡಿಸಲಾಗಿದೆ. ಹಾಗೂ ಈ ಕಾಮಗಾರಿಯನ್ನು ಮರುಟೆಂಡರ್ ಮಾಡಬೇಕಾಗಿದ್ದರಿಂದ ಅನುಷ್ಠಾನದಲ್ಲಿ ವಿಳಂಬವಾಗಿದೆ.

ಆ) ಈ ಕೆಲಸವನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಬೇಕಾಗಿದ್ದರಿಂದ ರಾಜ್ಯ ಸರ್ಕಾರದ ಕೆ.ಟಿ.ಪಿ.ಪಿ. ನಿಯಮಾವಳಿ ಪ್ರಕಾರ ಮರು ಗುತ್ತಿಗೆಯನ್ನು 2 ಕವರ್ ಸಿಸ್ಟಮ್ ಟೆಂಡರ್ ಪದ್ಧತಿಯಲ್ಲಿ

ದಿ: 21.02.2009 ರಂದು ಕರೆಯಲಾಗಿತ್ತು. ಈ ಟೆಂಡರ್ ಪ್ರಕಟಣೆಯು ಕೆಲವು ಪತ್ರಿಕೆಯಲ್ಲಿ ಮಾತ್ರ ಬಂದಿದ್ದು, ಕೆ.ಟಿ.ಪಿ.ಪಿ ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರದ ಟೆಂಡರ್ ಬುಲೆಟಿನ್ ಮತ್ತು ಜಿಲ್ಲಾ ಟೆಂಡರ್ ಬುಲೆಟಿನ್‌ಗಳಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಪ್ರಕಟಿಸಲಾಗಲಿಲ್ಲ. ಆದ್ದರಿಂದ ಟೆಂಡರ್ ಪ್ರಕ್ರಿಯೆಯನ್ನು ದಿ: 21.07.2009 ರಂದು ರದ್ದುಗೊಳಿಸಲಾಗಿದೆ.

ಇ) ಈ ಕಾಮಗಾರಿಗೆ ಮರು ಟೆಂಡರನ್ನು ದಿ: 21.08.2009 ರಂದು 2 ಕವರ್ ಸಿಸ್ಟಮ್ ಟೆಂಡರ್ ಪದ್ಧತಿಯಲ್ಲಿ ಕರೆಯಲಾಗಿದೆ. ಈ ಟೆಂಡರ್‌ಗೆ ಪ್ರತಿಕ್ರಿಯೆಯಾಗಿ ಬಂದಿರುವ ಟೆಂಡರ್‌ಗಳ "ಟೆಕ್ನಿಕಲ್ ಪ್ರಪೋಸಲ್" ತೆರೆದಿದ್ದು, ಇದನ್ನು ದಿ: 18.12.2009 ರಂದು ನಡೆದ "ಎಮ್‌ಪವರ್ಡ್ ಕಮಿಟಿ" ಯಲ್ಲಿ ಅನುಮೋದನೆಯಾಗಿದೆ. ಫೈನಾನ್ಸಿಯಲ್ ಬಿಡ್ಡನ್ನು ತೆರೆಯಲಾಗುವುದು.

ಈ) ಗುತ್ತಿಗೆ ಅನುಮೋದನೆಯ ನಂತರ ಕಾಮಗಾರಿ ಮುಗಿಸಲು 12 ತಿಂಗಳ ಕಾಲಾವಧಿ (ಮಳೆಗಾಲ ಹೊರತುಪಡಿಸಿ) ನಿಗದಿಪಡಿಸಲಾಗಿದೆ. ಆದ್ದರಿಂದ ಗುತ್ತಿಗೆ ಅನುಮೋದನೆಯ ನಂತರ, 12 ತಿಂಗಳ ಅವಧಿಯಲ್ಲಿ (ಮಳೆಗಾಲಹೊರತುಪಡಿಸಿ) ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಉ) ಈಗ ಈ ಕಾಮಗಾರಿಯ ಅಡಿಯಲ್ಲಿ ಒಟ್ಟು 11.87 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಅನುಷ್ಠಾನಕ್ಕೆ ಬಾಕಿ ಇದೆ.

640 ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಕ್ಷೇತ್ರದ ವ್ಯಾಪ್ತಿಯ ಪೆರೇಸಂದ್ರ ಮತ್ತು ನಂದಿ (ಔಟ್‌ಪೋಸ್ಟ್) ಆರಕ್ಷಕ ಹೊರಠಾಣೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಎರಡೂ ಠಾಣೆಗಳನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು;

ಇ) ಆ ಭಾಗದ ಜನರು ದೂರುಗಳನ್ನು ನೀಡಲು ತಾಲ್ಲೂಕಿನ ಇತರೆ ಠಾಣೆಗಳಿಗೆ ಹೋಗಲು ಸುಮಾರು 20 ಕಿ.ಮೀ.ಗಳಷ್ಟು ದೂರ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;